ಸಂಪಾದಕೀಯ

ರಾಹುಲ್ ಮೇಲ್ಪಂಕ್ತಿ ಹಾಕಲಿ

ಭಾರತದಲ್ಲಿ ಎಲ್ಲ ಪಕ್ಷಗಳಲ್ಲೂ ವಂಶವಾಹಿ ರಾಜಕಾರಣ ನಡೆಯುತ್ತಿದೆ. ದೇಶದ ಅಭಿವೃದ್ಧಿಗೆ ವಂಶವಾಹಿ ರಾಜಕಾರಣವೇ ಅಡ್ಡಿಯಾಗಿದೆ ಎಂದು ಹೇಳುವ ಮೂಲಕ ಕಾಂಗ್ರೆಸ್ ಉಪಾಧ್ಯಕ್ಷ ರಾಹುಲ್ ಗಾಂಧಿ ಕೊನೆಗೂ ಸತ್ಯ ಒಪ್ಪಿಕೊಂಡಿದ್ದಾರೆ. ಅಮೆರಿಕದ ವಿಶ್ವವಿದ್ಯಾಲಯವೊಂದರ ಭಾಷಣದಲ್ಲಿ ರಾಹುಲ್ ಹೇಳಿರುವಂತೆ, ಡಿಎಂಕೆ, ಸಮಾಜವಾದಿ ಪಕ್ಷ ಸೇರಿದಂತೆ ಅನೇಕ ಪಕ್ಷಗಳಲ್ಲಿ ವಂಶವಾಹಿ ರಾಜಕಾರಣವಿದೆ. ಉದ್ಯಮ, ಚಿತ್ರೋದ್ಯಮಗಳಲ್ಲಿಯೂ ಇದೆ. ಆದರೆ ವಂಶವಾಹಿ ಆಡಳಿತಕ್ಕೆ ನಾಂದಿ ಹಾಡಿದ್ದು ಯಾರು ಎನ್ನುವ ಪ್ರಶ್ನೆ ಪುನಃ ಅವರತ್ತಲೇ ತಿರುಗುತ್ತದೆ. ನೆಹರೂ, ಇಂದಿರಾಗಾಂಧಿ, ರಾಜೀವ್ ಗಾಂಧಿ, ರಾಹುಲ್ ಗಾಂಧಿ ವಂಶವಾಹಿ ಪರಂಪರೆ ಮುಂದುವರೆದುಕೊಂಡೇ ಬಂದಿದೆ. ಮೊದಲ ಮೂರು ಮಂದಿ ದೇಶವನ್ನಾಳಿದ ಸಂದರ್ಭದಲ್ಲಿ ಆ ಸ್ಥಾನ ತುಂಬಲು ಕಾಂಗ್ರೆಸ್‌ವೊಳಗೇ ಪರ್ಯಾಯ ನಾಯಕರ್ಯಾರೂ ಇರಲಿಲ್ಲವೇ ಎಂಬ ಪ್ರಶ್ನೆಗೆ ರಾಹುಲ್ ಗಾಂಧಿ ಅವರೇ ಉತ್ತರ ಹೇಳಬೇಕಿದೆ. ಇವರು ಹಾಕಿಕೊಟ್ಟ ಪರಂಪರೆಯನ್ನು ಅನ್ಯರು ಅಳವಡಿಸಿಕೊಂಡರೆ, ಪಾಲಿಸಿಕೊಂಡು ಬಂದರೆ ಅದೆಷ್ಟು ಆತ್ಮಸಂಕಟ ತುಂಬಿ ತುಳುಕಾಡುತ್ತಿದೆ ಎಂಬುದನ್ನು ಸ್ವತಃ ರಾಹುಲ್ ಗಾಂಧಿ ಅವರೇ ಅನಾವರಣ ಮಾಡಿಕೊಂಡಿದ್ದಾರೆ. ಇಷ್ಟೆಲ್ಲ ಹೇಳಿದವರು ಮುಂದಿನ ಲೋಕಸಭಾ ಚುನಾವಣೆಯಲ್ಲಿ ಪಕ್ಷವನ್ನು ತಾನು ಮುನ್ನಡೆಯಲು ಸಿದ್ಧ ಎಂದೂ ಹೇಳಿಕೊಂಡಿದ್ದಾರೆ. ವಂಶವಾಹಿ ರಾಜಕಾರಣಕ್ಕೆ ಕೊನೆ ಹಾಡಲು ಅವರಿಗೆ ನಿಜವಾಗಲೂ ಮನಸ್ಸಿದ್ದರೆ ಈ ಜವಾಬ್ದಾರಿಯನ್ನು ಬೇರೆ ಯುವ ಮುಖಂಡರಿಗೆ ವಹಿಸಬಹುದು. ಅನ್ಯರಿಗೆ ಪಕ್ಷದ ಅಧ್ಯಕ್ಷ ಪಟ್ಟ ಕಟ್ಟಬಹುದು, ಉಪಾಧ್ಯಕ್ಷ ಪಟ್ಟವನ್ನು ಇವರೇ ಬಿಟ್ಟುಕೊಡಬಹುದು. ಅಪ್ಪಿತಪ್ಪಿ ಮುಂದೆಂದರೂ ಈ ದೇಶದಲ್ಲಿ ಕಾಂಗ್ರೆಸ್ ಆಳ್ವಿಕೆ ನಡೆಸಿದರೆ ತಾವು ಪ್ರಧಾನಿ ಪಟ್ಟ ಏರುವುದಿಲ್ಲ, ಬೇರೆಯವರನ್ನು ಆ ಸ್ಥಾನದಲ್ಲಿ ಕೂರಿಸಲಾಗುವುದು ಎಂದು ಸಂಕಲ್ಪ ಮಾಡಬಹುದು. ಹೇಗೆ ಕಾಂಗ್ರೆಸ್ ದೇಶದಲ್ಲಿ ವಂಶವಾಹಿ ರಾಜಕಾರಣಕ್ಕೆ ನಾಂದಿ ಹಾಡಿದೆಯೋ, ಅದೇ ರೀತಿಯಲ್ಲಿ ವಂಶವಾಹಿ ರಾಜಕಾರಣ ತೊಡೆದು ಹಾಕಲು ಕಾಂಗ್ರೆಸ್ ಮಾದರಿಯಾಗಬಹುದು ಹಾಗೂ ಆ ವಿಚಾರದಲ್ಲಿ ರಾಹುಲ್ ಗಾಂಧಿ ಮೇಲ್ಪಂಕ್ತಿ ಹಾಕಿ ಕೊಡಬಹುದು. ಮಾತು ಮತ್ತು ಕೃತಿ ಬೇರೆ-ಬೇರೆ ಅಲ್ಲ ಎಂದು ಸಾಬೀತು ಮಾಡಬಹುದು. ರಾಹುಲ್ ಆ ಅವಕಾಶ ತಪ್ಪಿಸಿಕೊಳ್ಳದಿರಲಿ!

ಪ್ರಧಾನಿಯನ್ನೇ ಹೊಣೆ ಮಾಡಿದ ವಿಚಾರವಾದಿಗಳು

ಗೌರಿ ಲಂಕೇಶ್ ಹತ್ಯೆ ಖಂಡಿಸಿ ಬೆಂಗಳೂರಿನಲ್ಲಿ ನಡೆದ ಪ್ರತಿರೋಧ ಸಮಾವೇಶ ನಿರೀಕ್ಷೆಯಂತೆ ಬಲಪಂಥೀಯರ ವಿರೋಧಕ್ಕಷ್ಟೇ ಸೀಮಿತಗೊಂಡಿದೆ.ವಿಚಾರವಾದಿಗಳ ಹತ್ಯೆ ಪ್ರಕರಣವನ್ನು ಪ್ರಧಾನಿ ನರೇಂದ್ರ ಮೋದಿ ಹಾಗೂ ಸಂಘ-ಪರಿವಾರದ ತಲೆಗೆ ಕಟ್ಟುವ ಭರದಲ್ಲಿ ವಿಚಾರವಾದಿಗಳು ಸಾಮಾನ್ಯ ಜ್ಞಾನವನ್ನೇ ಮರೆತಂತೆ ಕಾಣುತ್ತಿದೆ. ಗೌರಿ ಲಂಕೇಶ್ ಹತ್ಯೆಯನ್ನು ಯಾರೂ ಸಮರ್ಥಿಸುವುದಿಲ್ಲ. ಆರೋಪಿಗಳ ಹೆಡೆಮುರಿ ಕಟ್ಟಿ ತಂದು ನ್ಯಾಯಾಲಯದ ಎದುರು ಹಾಜರುಪಡಿಸಬೇಕೆಂಬುದರಲ್ಲಿ ಎರಡನೇ ಮಾತೇ ಇಲ್ಲ. ಆದರೆ ಈ ಕೆಲಸವನ್ನು ಮಾಡಬೇಕಾದವರು ಯಾರು ? ಪ್ರಜಾತಂತ್ರ ವ್ಯವಸ್ಥೆಯಲ್ಲಿ ಕಾನೂನು-ಸುವ್ಯವಸ್ಥೆ ಎಂಬುದು ರಾಜ್ಯಕ್ಕೆ ಸಂಬಂಧಪಟ್ಟ ವಿಚಾರ. ಕರ್ನಾಟಕದಲ್ಲಿ ಇಂಥದೊಂದು ಘಟನೆ ನಡೆದಿದೆ ಎಂದಾಗ ಅದರ ನೇರ ಹೊಣೆ ರಾಜ್ಯ ಸರಕಾರಕ್ಕೇ ಸೇರಿದ್ದು.

ಆದರೆ ಬುದ್ಧಿಜೀವಿಗಳು ಈ ಸಾಮಾನ್ಯ ಸತ್ಯವನ್ನೂ ಅರ್ಥ ಮಾಡಿಕೊಳ್ಳದೇ ಪ್ರಧಾನಿಯನ್ನೇ ಆರೋಪಿ ಸ್ಥಾನದಲ್ಲಿ ನಿಲ್ಲಿಸಲು ಹೊರಟಿದ್ದಾರೆ. ಆದರೆ ಅದೇ ಕಾಲಕ್ಕೆ ಗೌರಿ ಹತ್ಯೆ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸುವುದಕ್ಕೂ ಇವರು ವಿರೋಧ ವ್ಯಕ್ತಪಡಿಸುತ್ತಾರೆ. ಅಂದರೆ ಹಾವು ಸಾಯಬಾರದು, ಕೋಲೂ ಮುರಿಯಬಾರದು ಎಂಬ ಧೋರಣೆಯನ್ನು ಈ ವಲಯ ತಾಳಿದೆಯೇ ಎಂಬ ಪ್ರಶ್ನೆಯನ್ನು ಈ ರ‍್ಯಾಲಿ ಹುಟ್ಟುಹಾಕಿದೆ.

ಕಾಲೆಳೆಯೋ ಕಾಲ

ಅಮೆರಿಕಾದಲ್ಲಿ ಕಕಿಬಕ

ರಾಗಾ ಅಮೆರಿಕಾ ಪ್ರವಾಸದಲ್ಲಿದ್ದಾರೆ.. ಈ ಪ್ರಾಯೋಜಿತ ಪ್ರವಾಸದಲ್ಲಿ ಪೂರ್ವನಿಶ್ಚಯದಂತೆ ಅವರಿಗೆ ಕಠಿಣ' ಪ್ರಶ್ನೆಗಳನ್ನೂ ಕೇಳಲಾಗಿದೆ. ಅದಕ್ಕೆಲ್ಲ ನಗುತ್ತಾ ಉತ್ತರಿಸಿರುವ ರಾಗಾ ಅಲ್ಲಿರುವವರನ್ನೆಲ್ಲ ನಗೆಗಡಲಲ್ಲಿ ತೇಲಿಸಿದ್ದಾರೆ. ಕತ್ತೆ ಮೇದಲ್ಲಿ ಮತ್ತೆ ಮೇವಿಲ್ಲ ಎಂಬಂತೆ ರಾಗಾ ಹೋಗಿಬಂದ ಮೇಲೆ ಬಹುಶಃ ನಮ್ಮ ಹಾಸ್ಯಭಾಷಣಕಾರರಿಗೆಲ್ಲ ಅಲ್ಲಿನ್ನು ಮಾರುಕಟ್ಟೆ ಬಂದ್ ಆದರೂ ಆಗಬಹುದು. ಅದಿರಲಿ, ಸದ್ಯಕ್ಕೆ ಹೊಟ್ಟೆಗೊಂದು ಗಟ್ಟಿ ಪಟ್ಟೆ ಕಟ್ಟಿಕೊಂಡು, ಕಂಬವನ್ನು ಭದ್ರವಾಗಿ ಹಿಡಿದುಕೊಂಡು ನಿನ್ನೆ ರಾಗಾ ಆಡಿದ ಕೆಲವು ಮಾತುಗಳು ಹಾಗೂ ಮಂಕನ ಪ್ರತಿಕ್ರಿಯೆಗಳನ್ನು ಓದಿಕೊಳ್ಳಿ. ಇದು ಕಾಕಾ' ವಿಧಿಸಿದ ಎಚ್ಚರಿಕೆ.

● ವಂಶಾಡಳಿತ ಎಂಬುದು ಅತ್ಯಂತ ಸಾಮಾನ್ಯ. ಅಭಿಷೇಕ್ ಬಚ್ಚನ್, ಅಖಿಲೇಶ್ ಯಾದವ್, ಸ್ಟಾಲಿನ್, ಅಂಬಾನಿ ಇವರೆಲ್ಲ ವಂಶಾಡಳಿತದವರೇ. ಭಾರತ ನಡೆಯುತ್ತಿರುವುದೇ ಹೀಗೆ. ಹಾಗಾಗಿ ನನ್ನತ್ತ ಬೊಟ್ಟು ತೋರಿಸಬೇಡಿ

– ಇಲ್ಲಿ ದೇವೇಗೌಡರ ಹೆಸರು ತೆಗೆಯದಿದ್ದುದು ಮಾತ್ರ ಕರ್ನಾಟಕಕ್ಕೆ ಮಾಡಿದ ಮೋಸ. ಅದಿರಲಿ, ಇದೇ ಜನ ಮುಂದೊಂದು ದಿನ ಭ್ರಷ್ಟಾಚಾರದ ವಿಚಾರದಲ್ಲೂ ಭಾರತ ನಡೆಯುತ್ತಿರುವುದೇ ಹೀಗೆ ಎಂದು ನುಡಿದರೆ ಏನು ಮಾಡೋಣ??

● ಇವತ್ತು ಕೇಂದ್ರ ಸರಕಾರ ಮಾಡುತ್ತಿರುವ ಎಲ್ಲ ಯೋಜನೆಗಳನ್ನೂ ಮೊದಲು ಹೇಳಿದ್ದು ನಾವೇ. ನಾವು ಹೇಳಿದ್ದನ್ನೇ ಅವರು ಮಾಡುತ್ತಿದ್ದಾರೆ ಅಷ್ಟೇ.

– ಬರೀ ಹೇಳುವವರ ಪಕ್ಷ ತಮ್ಮದು ಎಂಬುದು ಇವರ ಮಾತಿನ ತಾತ್ಪರ್ಯವಾ? ಎಂಥ ಅಂಡೆಪಿರ್ಕಿ ಮಾರ್ರೆ.. ಅಂದಹಾಗೆ ಇದು ಹೊಗಳಿಕೆಯೋ, ತೆಗಳಿಕೆಯೋ ಎಂಬುದೇ ಗೊತ್ತಾಗುತ್ತಿಲ್ಲವಲ್ಲ.. ಆದರೂ ಸತ್ಯವನ್ನೇ ಹೇಳಿದ್ದಾರೆ ಬಿಡಿ.

● ಇಂದಿರಾ ಗಾಂಧಿಯವರನ್ನು ಒಮ್ಮೆ ಭಾರತ ಎಡಕ್ಕೆ ಹೊರಳಲಿದೆಯೋ ಬಲಕ್ಕೋ ಎಂದು ಕೇಳಿದಾಗ ಅವರು ಮಧ್ಯದಲ್ಲಿ ನೇರವಾಗಿ ಮೇಲಕ್ಕೆ ಬೆಳೆಯಲಿದೆ ಎಂದಿದ್ದರು

– ಉಹಾಹಾಹಾಹಾ...

● ಕಾಂಗ್ರೆಸ್ ಪರಸ್ಪರ ಚರ್ಚೆಯ ಮೂಲಕ ನೀತಿಯನ್ನು ನಿರೂಪಿಸುತ್ತದೆಯೇ ಹೊರತೂ ಹೇರುವಿಕೆಯ ಮೂಲಕವಲ್ಲ..

– ಬರೀ ಇಬ್ಬರ ನಡುವೆ ನಡೆಯುವುದಕ್ಕೂ ಚರ್ಚೆ ಎಂದೇ ಹೇಳುತ್ತಾರೆಂಬುದು ಅವರಿಗೂ ಗೊತ್ತು ಎಂದಾಯ್ತು.

● ಲೋಕಸಭೆಯು 546 ಸದಸ್ಯತ್ವ ಹೊಂದಿದೆ

– ಪಾಪ ಅವರು ಹೇಳಿದ್ದು ಇಟಲಿ ಲೋಕಸಭೆಯದ್ದಿರಬೇಕು..

● ಜಮ್ಮುಕಾಶ್ಮೀರದಲ್ಲಿ ಶಾಂತಿ ಸ್ಥಾಪಸಲು ನಾನು ಒಂಬತ್ತು ವರ್ಷಗಳ ಕಾಲ ತೆರೆಮರೆಯಲ್ಲಿ ಪ್ರಯತ್ನಿಸಿದ್ದೇನೆ.

– ಬಚಾವ್! ತೆರೆಯ ಮುಂದೆ ಬಂದಿದ್ದರೆ ಪಾಪ ಉಗ್ರರೆಲ್ಲ ನಗಾಡಿ ನಗಾಡಿಯೇ ಸಾಯುತ್ತಿದ್ದರು ಪಾಪ..

● ಮೋದಿ ನನಗಿಂತ ಚೆನ್ನಾಗಿ ಮಾತನಾಡಬಲ್ಲರು

– ಓಹ್, ನಿಜ ಹೇಳುವುದೂ ರಾಜಕಾರಣಿಗಳ ತಂತ್ರಗಾರಿಕೆಯಲ್ಲಿ ಹೊಸದಾಗಿ ಸೇರಿಕೊಂಡಿದೆಯಾ?

ಕೊನೆ ಪದರ: ರಾಗಾ ಮಾತು ಕೇಳಿ ಅಮೆರಿಕಾದ ಟ್ರಂಪ್ ವಿರೋಧಿಗಳಿಗೂ ಟ್ರಂಪ್ ಅವರ ಆಯ್ಕೆಯೇ ಪರವಾಗಿಲ್ಲ ಎನಿಸುತ್ತಿದೆಯಂತೆ.

ಕಾಕಾ ಹೋಟ್ಲು

ಧೀರು: ಪ್ರತಿರೋಧ ಸಮಾವೇಶದಲ್ಲಿ ಕಾರ್ನಾಡರು ಭಾಷಣ ಮಾಡೇ ಇಲ್ಲ?
ಸುಧೀರು: ಪ್ರತಿರೋಧ ಒಡ್ಡಿದ್ರೆ ಎಲ್ಲಿ ಏನಾಗುತ್ತೊ ಅಂತ ಭಯ ಆಗಿರ್ಬೇಕು.

ದಿಟ್ಟ ಪತ್ರಕರ್ತೆಯೊ, ಕೆಟ್ಟ ಪತ್ರಕರ್ತೆಯೊ ನೀವೇ ನಿರ್ಧರಿಸಿ

ಪ್ರಥಮ ಪೂಜೆ

ವಿನಾಯಕ ಭಟ್ ಮೂರೂರು
vinayak@vishwavani.news

ಗೌರಿ ಲಂಕೇಶ್ ಕೊಲೆಯಾಗಿದ್ದು ಯಾಕೆ? ಎಡದವರು ಮಾಡಿದರಾ? ಬಲದವರೇ ಮಾಡಿದ್ರಾ? ಎರಡೂ ಅಲ್ಲದ ಎಡಬಿಡಂಗಿಗಳು ಮಾಡಿದ್ರಾ? ಮಾಡಿದ್ದರೆ ಯಾಕೆ? ಇದೇ ಚರ್ಚೆ. ಎಡ-ಬಲಗಳ ಚರ್ಚೆ ಸಾಕಷ್ಟು ನಡೆದಿದೆ. ಎರಡೂ ಬಣದವರು ಗುದ್ದಾಡುತ್ತಿದ್ದಾರೆ.

ಇದೆಲ್ಲದರ ನಡುವೆ ಆಕೆ ಧೀಮಂತ, ಧೀರ, ದಿಟ್ಟ ಪತ್ರಕರ್ತೆಯಾಗಿದ್ದು ಮಾತ್ರ ವಿಪರ್ಯಾಸ!

ನಾವು ಯಾರನ್ನು ಧೀಮಂತ, ದಿಟ್ಟ ಪತ್ರಕರ್ತೆ ಎಂದು ಕರೆಯುತ್ತಿದ್ದೇವೆ? ಜೀವಿತಾವಧಿಯಲ್ಲಿ ಪತ್ರಕರ್ತೆಯಾಗಿ ಅವರು ಮಾಡಿದ ಸಾಧನೆಯೇನು? ಪತ್ರಿಕೋದ್ಯಮಕ್ಕೆ ಅವರ ಕೊಡುಗೆಯೇನು? ಅವರು ನಿಜವಾಗಿಯೂ ಪತ್ರಿಕಾ ಧರ್ಮವನ್ನು ಪಾಲಿಸಿದ್ದರಾ? ಈ ಎಲ್ಲ ಅಂಶಗಳನ್ನು ನಾವು ಸಂಪೂರ್ಣ ಕಡೆಗಣಿಸಿದ್ದೇವೆ. ಕೊಲೆಯಾದರು ಎಂಬ ಕಾರಣಕ್ಕೆ ಅವರೊಬ್ಬ ದಿಟ್ಟ ಪತ್ರಕರ್ತೆಯಾಗಿದ್ದರು ಎಂದು ತೀರ್ಮಾನಿಸಿದಂತಿದೆ.

ಗೌರಿ ಲಂಕೇಶ್ ಪತ್ರಕರ್ತೆಯಾಗಿದ್ದರು ನಿಜ. ಯಾವ ಪತ್ರಿಕೆಗೆ? ಅವರು ನಡೆಸುತ್ತಿದ್ದುದು ಟ್ಯಾಬ್ಲ್ಯಾಡ್. ಅದನ್ನು ಪೀತ ಪತ್ರಿಕೋದ್ಯಮ ಎಂದು ಕರೆಯುತ್ತಾರೆ. ನಿಜವಾಗಿಯೂ ಪತ್ರಕರ್ತರಾದವರು ಪೀತ ಪತ್ರಿಕೆಗಳಲ್ಲಿ ಕೆಲಸ ಮಾಡುವವರನ್ನು 'ಪತ್ರಕರ್ತರು'ಎಂದು ಪರಿಗಣಿಸುವುದಿಲ್ಲ. ಅವರನ್ನೊಂಥರ ಅಸ್ಪೃಶ್ಯರಂತೆ ನೋಡಲಾಗುತ್ತದೆ. ಅದಕ್ಕೆ ಕಾರಣ ಅವರ ಬರವಣಿಗೆ. ಅವರಿಗೆ ಯಾವುದೇ ವರದಿ ಬರೆಯುವುದಕ್ಕೆ ದಾಖಲೆ, ಸಾಕ್ಷ್ಯ ಬೇಕೆಂದಿಲ್ಲ. ಅರೆಬರೆ ಮಾಹಿತಿಯ, ಗಾಳಿ ಸುದ್ದಿಗಳೂ ಸಾಕು, ಒಂದು ಅದ್ಭುತ ಎನ್ನಿಸುವಂಥ ವರದಿ ಬರೆದುಬಿಡುತ್ತಾರೆ. ಹಾಗಾಗಿಯೇ ಅದರಲ್ಲಿ ಬಂದಿದ್ದನ್ನು ಹಲವರು ಬಾಯಿ ಚಪ್ಪರಿಸಿಕೊಂಡು ಓದುತ್ತಾರಾದರೂ, ನಂಬುವುದು ಅಷ್ಟಕ್ಕಷ್ಟೇ. ನಿಮ್ಮದು ಮಾತ್ರ ಪತ್ರಿಕೋದ್ಯಮವಾ? ಎಂದು ಕೆಲವರು ತಿವಿಯಬಹುದು. ನಮ್ಮದು ಮಾತ್ರ ಪತ್ರಿಕೋದ್ಯಮ, ನಾವು 100ಕ್ಕೆ 100 ಪತ್ರಿಕಾಧರ್ಮ ಪಾಲಿಸುತ್ತಿದ್ದೇವೆ ಎಂದು ಹೇಳುತ್ತಿಲ್ಲ. ಆದರೆ ಅವರಷ್ಟು ಕೀಳುಮಟ್ಟಕ್ಕೂ ಇಳಿದಿಲ್ಲ.

ಗೌರಿ ಲಂಕೇಶ್ ಅವರ ತಂದೆ ಪಿ. ಲಂಕೇಶ್ ಪ್ರಖರ ಲೇಖನಕ್ಕೆ ಹೆಸರಾದವರು. ಅವರು ಮಾಡುತ್ತಿದ್ದ ಟೀಕೆಗೆ ಹೋಲಿಸಿದರೆ ಗೌರಿ ಲಂಕೇಶ್ ಮಾಡುತ್ತಿದ್ದ ಟೀಕೆ ಏನೇನೂ ಅಲ್ಲ. ಆದರೂ ಲಂಕೇಶ್‌ರನ್ನು ಎಲ್ಲರೂ ಇಷ್ಟಪಡುತ್ತಿದ್ದರು. ಕಾರಣ ಲಂಕೇಶ್‌ರ ಟೀಕೆ ಜೊಳ್ಳಾಗಿರುತ್ತಿರಲಿಲ್ಲ. ಅದರಲ್ಲಿ ಸತ್ವ ಇರುತ್ತಿತ್ತು. ಇರುವ ಸತ್ವವನ್ನೇ ಇನ್ನಷ್ಟು ರಂಜನೀಯವಾಗಿ, ತೀಕ್ಷ್ಣವಾಗಿ ಬರೆಯುತ್ತಿದ್ದರು. ಅದಕ್ಕಾಗಿಯೇ ಅವರು ಪ್ರಕಟಿಸಿದ ವರದಿಯಿಂದ ಸರಕಾರವೇ ಉರುಳಿದರೂ, ಯಾರೂ ಅವರ ತಂಟೆಗೆ ಹೋಗುತ್ತಿರಲಿಲ್ಲ.

ಆದರೆ ಅದೇ ಮಾತನ್ನು ಗೌರಿಯ ಬರವಣಿಗೆ ಬಗ್ಗೆ ಹೇಳುವಂತಿಲ್ಲ. ಗೌರಿ ಲಂಕೇಶ್ ಪತ್ರಿಕೆಯಲ್ಲಿ ಸೈದ್ಧಾಂತಿಕ ವಿಷ ಕಾರುವಿಕೆ ಕಣ್ಣಿಗೆ ರಾಚುತ್ತದೆ. ಅಂತಹ ಬರವಣಿಗೆ ದ್ವೇಷಕ್ಕೆ ಕಾರಣವಾಗುತ್ತದೆ. ಅದರ ಹೊರತಾಗಿ ಅವರ ಪತ್ರಿಕೆಯಲ್ಲಿ ಸರಕಾರ ತಲೆ ಎತ್ತಿ ನೋಡುವಂಥ, ರಾಜ್ಯಾದ್ಯಂತ ಸುದ್ದಿಯಾದ, ಸಾಕಷ್ಟು ಚರ್ಚೆಯಾದ, ಸ್ಫೋಟಕ ಎನ್ನುವಂಥ, ಒಂದು ಒಳ್ಳೆಯ ಬದಲಾವಣೆಗೆ ಕಾರಣವಾದ ಒಂದು ವರದಿ ತೋರಿಸಿ.

ಗೌರಿ ಲಂಕೇಶ್ ಅವರ ಪತ್ರಿಕೆಯಲ್ಲಿ ಯಾವ ರೀತಿಯ ಭಾಷೆ ಬಳಕೆಯಾಗುತ್ತಿತ್ತು? ಕೆಲವು ಉದಾಹರಣೆಗಳನ್ನು ನೋಡಿ. 'ನಕಲಿ ಮೋದಿ ಫೇಕ್ ಡಿಗ್ರಿ', 'ಮೋದಿ ಎಂಬ ಹುಚ್ಚವೆಂಕಟ್', 'ಬೂಸಿ ಬಸ್ಯ ಮೋದಿ', 'ತುಘಲಕ್ ಮೋದಿ', 'ಮಂಡ್ಯ: ತಮ್ಮಣ್ಣನ ಬಾಲಕ್ಕೆ ಚೆಲುವಣ್ಣನ ಬೆಂಕಿ', 'ರಾಯಣ್ಣನ ಹೆಸರು, ಮನುವಾದಿಗಳ ಬಸಿರು, 'ಚೆಡ್ಡಿ ಸಂಸದರ ನಖರಾ', 'ಸಂಘಿ ಸೈತಾನ ಭಟ್ಟ', 'ಚಾಂಡಾಲ ಭಟ್ಟನಿಗೆ ಇನ್ನೆಷ್ಟು ಬಲಿ?', 'ಒಂದು ಕೇಸರಿ ಮೊಟ್ಟೆಯ ಕತೆ' ಹೀಗೆ ಸಾಗುತ್ತವೆ ಶೀರ್ಷಿಕೆಯ ಧಾಟಿ. 2007ರಲ್ಲಿ ಮಂಗಳೂರಿನಲ್ಲಿ ಸುಖಾನಂದ ಶೆಟ್ಟಿ ಕೊಲೆಯಾದಾಗ 'ಒಬ್ಬ ಕ್ರಿಮಿಯ ಅಂತ್ಯ' ಎಂದು ಶೀರ್ಷಿಕೆ ನೀಡಲಾಗಿತ್ತು.

ಈಗ ಸತ್ತಮೇಲೆ ಕೆಟ್ಟದಾಗಿ ಮಾತನಾಡಬಾರದು ಎಂದು ಅವರ ಬೆಂಬಲಿಗರೇ ವೇದಾಂತ ನುಡಿಯುತ್ತಿದ್ದಾರೆ!

ಇವೆಲ್ಲ ಜವಾಬ್ದಾರಿಯುತ ಪತ್ರಕರ್ತರು ಬಳಸುವ ಭಾಷೆಯೇ? ಈ ಶಬ್ದಗಳ ಹಿಂದಿರುವುದು ನಿಜವಾದ ಕಾಳಜಿಯೇ? ದ್ವೇಷವೇ? ಎಂಬುದನ್ನು ನೀವೇ ಅರಿತುಕೊಳ್ಳಬಹುದು. ಗೌರಿ ಲಂಕೇಶ್ ಕೇವಲ ಬಿಜೆಪಿ ಹಾಗೂ ಬಲಪಂಥೀಯರ ವಿರುದ್ಧ ಬರೆಯುತ್ತಿದ್ದರು ಎಂದು ಹೇಳುತ್ತಿಲ್ಲ. ಕಾಂಗ್ರೆಸ್ ವಿರುದ್ಧವೂ ಪತ್ರಿಕೆಗಳಲ್ಲಿ ವರದಿ ಪ್ರಕಟವಾಗಿದೆ. 'ಮರಿಗೌಡ ಎಂಬ ಕಪ್ಪು ಚುಕ್ಕೆ', 'ಎಚ್ಚೆತ್ತುಕೊಳ್ಳಿ ಸಿದ್ದು', 'ರೇವಣ್ಣನಿಗೆ ಫ್ರೆಟ್', ಸಚಿವ ಆಂಜನೇಯ ಅವರ ಬಗ್ಗೆ 'ಮಿನಿಸ್ಟರ್ ಚಾರ್ವಾಕ', 'ಮುದಿ ಮೇಟಜ್ಜನ 'ಕಾಮ'ಗಾರಿ' ಎಂಬ ಶೀರ್ಷಿಕೆಗಳಿವೆ. ಆದರೆ ಶೀರ್ಷಿಕೆಗಳನ್ನು ನೀವೇ ಹೋಲಿಸಿ ನೋಡಿದರೆ ಎರಡರಲ್ಲೂ ಆಗಿರುವ ಪದಬಳಕೆಯ ವ್ಯತ್ಯಾಸವನ್ನು ನೀವು ಗುರುತಿಸಬಹುದು.



ಗೌರಿ ಲಂಕೇಶ್
ರಂಜನೆ ಬೋಧನೆ ಪ್ರಚೋದನೆ
ಆಧುನಿಕ ಶಿಕ್ಷಣದ ಹರಿಕಾರ ಸಯ್ಯದ್ ಅಹಮದ್ ಖಾನ್
ಚೆಡ್ಡಿ ಸಂಸದರ ನಖರಾ
ಉಳಿಸಿಹೋದ ಕೊರಗು
ಉಗ್ರಪ್ಪ ವಿರುದ್ಧ ರಾಘು ಪಟಾಲಂ
ಮಳವಳ್ಳಿ: ಕೇಬಲ್ ಕುಮಾರನ ಹಂತಕರು ಅಂದರ್
ಕುಷ್ಟಗಿ: ಸೂಡಿ ವಕೀಲರ 'ಜೆಡಿಎಸ್' ಕೊಸರಾಟ
ಬ್ರಾಗಳು ಮೇಕೆ ಬಾಡು ತಿಂದದ್ದು
ನಕಲಿ ಮೋದಿ ಫೇಕ್ ಡಿಗ್ರಿ
ಮಂಡ್ಯ:ತಮ್ಮಣ್ಣನ ಬಾಲಕ್ಕೆ ಚೆಲುವಣ್ಣನ ಬೆಂಕಿ!
ಚಿತ್ರದುರ್ಗ: ಬಾಣಲೆಯ ಕಾಂಗ್ರೆಸ್‌ಗೆ ಬೆಂಕಿಯ 'ಸೌಭಾಗ್ಯ'
ಉತ್ತರ ಕನ್ನಡ: ಡಿಸಿ-ಎಮ್ಮೆಲ್ಲೆ ಡಿಶುಂ..! ಡಿಶುಂ!!
ಹುಬ್ಬಳ್ಳಿ: ಮಲಹೊರುವ ಮಕ್ಕಳ ಮೇಲೆ ಕ'ಮಲ' ಪ್ರೀತಿ
ಜೀವ ಕಾರುಣ್ಯದ ಹೇಮರೆಡ್ಡಿ ಮಲ್ಲಮ್ಮ
ಮುದಿ ಮೇಟಜ್ಜನ ಕಾಮಗಾರಿ
ರೇಪಿಸ್ಟ್ ನ್ಯೂಮರಾಲಜಿಸ್ಟ್ ಎಸ್ಕೇಪ್
ಬೈಂದೂರು ಶಾಸಕ ಪೂಜಾರಿಯ ಅಕ್ರಮ-ಸಕ್ರಮ
ಮಂಡ್ಯ ಭೀಮಾನಾಯ್ಕನ ಬೆತ್ತಲು ಮಾಡಿದ
ದಾವಣಗೆರೆ ಕಳಚಿ ಬಿತ್ತು ಮಾದಾರ ಚೆನ್ನಯ್ಯನ
ಪಾಬ್ಲೊ ನೆರೂಡಾ ಜನುಮ ದಿನ
ಡಿವೈಎಸ್‌ಪಿ ಗಣಪತಿ ಎಂಥಾ ವ್ಯಕ್ತಿತ್ವ? ಏನೆಲ್ಲಾ ಘನಕಾರ್ಯ?
ಹಾವೇರಿ ವಸತಿ ಸಚಿವನ ಅರಣ್ಯ ಸ್ವಾಹಾ!
ಚಿತ್ರದುರ್ಗ ಖೋಟಾ ನೋಟಿನ ಮಾಚಂಗೋ ಗ್ಯಾಂಗ್
ವಿಕೃತ ವಿಮಾ ಯೋಜನೆಯೂ ರೈತರಿಗೆ ಮೋದಿ ಮೋಸವೂ!!

ಗೌರಿ ಲಂಕೇಶ್ ವಿರುದ್ಧ 60 ಮಾನಹಾನಿ ಪ್ರಕರಣಗಳು ವಿವಿಧ ನ್ಯಾಯಾಲಯಗಳಲ್ಲಿವೆ. ಸಂಸದ ಪ್ರಹ್ಲಾದ್ ಜೋಶಿ ವಿರುದ್ಧ ಮಾನಹಾನಿಕರವಾಗಿ ಬರೆದಿದ್ದಾರೆ ಎಂದು ತೀರ್ಮಾನಿಸಿದ ನ್ಯಾಯಾಲಯವೇ ಗೌರಿಗೆ ಆರು ತಿಂಗಳ ಜೈಲು ಹಾಗೂ ರು.10,000 ದಂಡ ವಿಧಿಸಿತ್ತು. ಆ ಪ್ರಕರಣದಲ್ಲಿ ಜಾಮೀನು ಪಡೆದುಕೊಂಡಿದ್ದಾರೆ. ಇನ್ನು 58 ಪ್ರಕರಣಗಳು ವಿವಿಧ ಹಂತದಲ್ಲಿದ್ದವು. ಪತ್ರಕರ್ತರ ವಿರುದ್ಧ ಪ್ರಕರಣಗಳು ಇರುತ್ತವೆ. ಆದರೆ ಯಾಕಾಗಿವೆ ಮತ್ತು ಯಾವ ರೀತಿಯ ಭಾಷೆ ಬಳಸಿದ್ದಕ್ಕಾಗಿವೆ ಎಂಬುದು ಮುಖ್ಯವಾಗುತ್ತದೆ.

ಸಂಸದ ಪ್ರತಾಪ್ ಸಿಂಹರನ್ನು 'ತರ್ಲೆ ಸಿಮ್ಮ' ಎಂದು ಕರೆಯುವುದು. ಉತ್ತರ ಪ್ರದೇಶ ಮುಖ್ಯಮಂತ್ರಿ ಆದಿತ್ಯನಾಥ್ ಥರ ಇರುವ ವ್ಯಕ್ತಿ ಹುಡುಗಿಯೊಬ್ಬಳ ಜತೆಗಿರುವ ಫೋಟೊವನ್ನು ಪ್ರಭಾ ಬೆಳವಂಗಲ ಎಂಬಾಕೆ ಫೇಸ್‌ಬುಕ್‌ಗೆ ಹಾಕಿದ್ದಳು. ಅದನ್ನು ಪತ್ರಿಕೆಯ ವರದಿಯೊಂದರಲ್ಲಿ ಪ್ರಸ್ತಾಪಿಸುವಾಗ 'ಉತ್ತರಪ್ರದೇಶ ಮುಖ್ಯಮಂತ್ರಿ ಆದಿತ್ಯನಾಥ್ ಅವರು ಹುಡುಗಿಯೊಬ್ಬಳೊಂದಿಗಿರುವ ಫೋಟೊ ಫೇಸ್‌ಬುಕ್‌ಗೆ ಹಾಕಿದ' ಎಂದು ಬರೆಯುತ್ತಾರೆ. ಇದು ಸಾಚಾ ಮತ್ತು ನಿಷ್ಪಕ್ಷಪಾತ ಪತ್ರಿಕೋದ್ಯಮವಾ? ನಿಜವಾದ ಪತ್ರಕರ್ತೆಯಾಗಿ ಬರೆಯಬಹುದಾಗಿದ್ದರೆ 'ಉತ್ತರಪ್ರದೇಶ ಮುಖ್ಯಮಂತ್ರಿ ಆದಿತ್ಯನಾಥ್ ಹುಡುಗಿಯೊಂದಿಗಿದ್ದಂತೆ ಕಾಣುವ ನಕಲಿ ಫೋಟೊ ಫೇಸ್‌ಬುಕ್‌ಗೆ ಹಾಕಿದ' ಎಂದು ಬರೆದಿದ್ದರೆ ಸರಿಯಾಗುತ್ತಿತ್ತು. ಯಾಕೆಂದರೆ ಆ ಫೋಟೊ ನಕಲಿ ಎಂಬುದು ಆಗಲೇ ಸಾಬೀತಾಗಿತ್ತು.

ಆರೋಪಿಯೇ ಅಲ್ಲದಿದ್ದರೂ ಒಬ್ಬರನ್ನು ಕೊಲೆಗಾರ ಎಂದು ಕರೆಯುವುದು. ಹಾಗೆ ನೋಡಿದರೆ ನಮ್ಮ ಕಾನೂನಿನ ಪ್ರಕಾರ ನ್ಯಾಯಾಲಯದಲ್ಲಿ ಶಿಕ್ಷೆಯಾಗುವ ತನಕ ಆರೋಪಿಯನ್ನು ಕೂಡ ನೀವು ಕೊಲೆಗಾರ ಎಂದು ಕರೆಯುವಂತಿಲ್ಲ. ಆತ ಕೊಲೆ ಆರೋಪಿ ಅಷ್ಟೇ. ಹೀಗಿರುವಾಗ ಅವರ ಪತ್ರಿಕೆಯಲ್ಲಿ ಆರೋಪಿಯೇ ಅಲ್ಲದವರನ್ನು 'ಕೊಲೆಗಾರ' ಎಂದು ಬರೆದ ಉದಾಹರಣೆಗಳಿವೆ. ಇದು ಯಾವ ಪತ್ರಿಕಾ ಧರ್ಮ ಎಂದು ಯಾರಾದರೂ ಹೇಳಬಲ್ಲಿರಾ?

ಎಂ.ಕೆ. ಗಣಪತಿ ಪ್ರಕರಣ ನಿಮಗೆಲ್ಲ ಗೊತ್ತೇ ಇದೆ. ಆ ಬಗ್ಗೆ ಬರೆದ ವರದಿ ಹೇಗಿತ್ತು ಗೊತ್ತಾ? 'ಸತ್ತವರ ಬಗ್ಗೆ ಕೆಟ್ಟದಾಗಿ ಮಾತನಾಡಬಾರದಂತೆ. ಅದು ಇಸ್ಲಾಂ ನಮಗೆ ಹೇಳಿಕೊಟ್ಟ ಪಾಠ. ಆದರೆ ಗಣಪತಿ ಬಗ್ಗೆ ಹುಡುಕುತ್ತಾ ಹೋದರೂ ಒಂದೂ ಒಳ್ಳೆಯದು ಸಿಗಲಿಲ್ಲ' ಎಂದು ಬರೆಯುತ್ತಾರೆ. 'ಅವರು ಸಂಘ ಪರಿವಾರದ ಪರವಾಗಿದ್ದರು. ಅವರ ಘಟನೆಗಳ ವಿರುದ್ಧ ಮೆದುವಾಗಿದ್ದರು ಎಂಬುದಕ್ಕೆ 'ಸಾಕಷ್ಟು ಸಾಕ್ಷ್ಯಗಳಿವೆ' ಎಂದೂ ಬರೆಯಲಾಗಿದೆ. ಎಂ.ಕೆ. ಗಣಪತಿ ಅವರು ಮಂಗಳೂರಿನಲ್ಲಿ ಇನ್‌ಸ್ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ನಾನು ಮಂಗಳೂರಿನಲ್ಲಿ ಕ್ರೈಂ ವರದಿಗಾರನಾಗಿ ಕೆಲಸ ಮಾಡುತ್ತಿದ್ದೆ. ಅವರು ಉಳ್ಳಾಲ, ಕದ್ರಿ, ಮಂಗಳೂರು ಗ್ರಾಮಾಂತರ ಠಾಣೆಗಳಲ್ಲಿ ಕರ್ತವ್ಯ ನಿರ್ವಹಿಸಿದ್ದನ್ನು ನಾನು ನೋಡಿದ್ದೇನೆ. ನನಗೆ ಅವರೆಂದೂ ಸಂಘಪರಿವಾರದ ಕೈಗೊಂಬೆ ಎಂದಾಗಲಿ, ಬಲಪಂಥೀಯರು ಎಂದಾಗಲೀ ಯಾವತ್ತೂ ಅನ್ನಿಸಿರಲಿಲ್ಲ. ಉಳ್ಳಾಲದಲ್ಲಿ ಒಮ್ಮೆ ಗಲಭೆಯಾದಾಗ ಇನ್‌ಸ್ಪೆಕ್ಟರ್ ಆಗಿದ್ದ ಎಂ.ಕೆ. ಗಣಪತಿ ವಿರುದ್ಧ ಸಂಘಪರಿವಾರದವರೇ ಪ್ರತಿಭಟನೆ ಮಾಡಿದ್ದರು. 'ಅವರು ಸರಕಾರದ ಮಾತು ಕೇಳಿ ಮುಸ್ಲಿಮರನ್ನು ಬಂಧಿಸುತ್ತಿಲ್ಲ' ಎಂದು ಆರೋಪಿಸಿದ್ದರು. ಗಣಪತಿ ಒಬ್ಬ ಅತ್ಯಂತ ದಕ್ಷ ಮತ್ತು ಪ್ರಾಮಾಣಿಕ ಅಧಿಕಾರಿಯಾಗಿದ್ದರು ಎಂದು ನಾನು ಕೂಡ ಹೇಳುವುದಿಲ್ಲ. ಆದರೆ ಗೌರಿ ಬರೆದಷ್ಟು ಕೆಟ್ಟ ಅಧಿಕಾರಿಯೂ ಅವರಾಗಿರಲಿಲ್ಲ ಎಂಬುದನ್ನು ಮಾತ್ರ ಹೇಳಬಲ್ಲೆ.

ಗೌರಿ ಲಂಕೇಶ್ ಮೋದಿಯ ಕಟ್ಟಾ ವಿರೋಧಿಯಾಗಿದ್ದರು. ಸಾಕಷ್ಟು ಜನರಿದ್ದಾರೆ. ಖಂಡಿತ ಅವರಿಗೆ ಹಾಗಿರುವ ಸ್ವಾತಂತ್ರ್ಯವಿದೆ. ಒಮ್ಮೆ ಅವರು ಮೋದಿಯನ್ನು 'ಗೇ' ಎಂದು ಕರೆದಿದ್ದಳು. ಇನ್ನೊಂದು ಫೇಸ್‌ಬುಕ್ ಪೋಸ್ಟ್‌ನಲ್ಲಿ 'ಚೆಡ್ಡಿಗಳೇ ನಿಮ್ಮ ತಾಯಿಗೆ ಲೈಂಗಿಕ ಸ್ವಾತಂತ್ರ್ಯ ಇಲ್ಲವೆಂದಾದರೆ ಅವಳು ಲೈಂಗಿಕ ಗುಲಾಮಗಿರಿ ಮಾಡುವವಳು. ಹಾಗಾಗಿ ನೀವು ಅತ್ಯಾಚಾರಕ್ಕೆ ಹುಟ್ಟಿದವರು' ಎಂದು ಬರೆದಿದ್ದರು. ಇನ್ನೊಮ್ಮೆ ಟ್ವಿಟರ್‌ನಲ್ಲಿ 'ಪಿಂಕ್ ಚೆಡ್ಡಿಯಿಂದ ಮೋದಿ ವಿರುದ್ಧ ಸ್ಯಾನಿಟರಿ ನ್ಯಾಪ್‌ಕಿನ್ ಕ್ಯಾಂಪೇನ್? ಫ್ರೆಶ್ (ಹೊಸ) ನ್ಯಾಪ್‌ಕೀನ್‌ಗಳು ಯಾಕೆಬೇಕು? ಬಳಸಿದ ನ್ಯಾಪ್‌ಕಿನ್‌ಗಳನ್ನು ಕಳಿಸಿಕೊಡೋಣ' ಎಂದಿದ್ದರು. ಯಾರಾದರೂ ಇಷ್ಟು ಕೀಳಾಗಿ ವಿಚಾರ ಮಾಡಲು ಸಾಧ್ಯವಾ? ಪತ್ರಕರ್ತನಂತಹ ಜವಾಬ್ದಾರಿಯುತ ಸ್ಥಾನದಲ್ಲಿದ್ದು, ಇಷ್ಟು ಕೀಳಾಗಿ ಬರೆಯುವುದು ಧೀಮಂತ, ದಿಟ್ಟ ಪತ್ರಕರ್ತರ ಲಕ್ಷಣವಾ?

ನಾವೆಷ್ಟು ಕೀಳಾಗಿ ವರ್ತಿಸುತ್ತೇವೊ ಅಷ್ಟೇ ಕೀಳು ವಿರೋಧಿಗಳು ನಮಗೆ ಹುಟ್ಟಿಕೊಳ್ಳುತ್ತಾರೆ ಎಂಬುದನ್ನೂ ನಾವು ಪತ್ರಕರ್ತರು ನೆನಪಿಡಬೇಕಲ್ಲವೇ?

ಇತ್ತೀಚೆಗೆ ಮೈಸೂರಿನ ಕಾರ್ಯಕ್ರಮವೊಂದರಲ್ಲಿ ಪತ್ರಕರ್ತ ಕೃಷ್ಣಪ್ರಸಾದ್ ಅವರು 'ಗೌರಿಯನ್ನು ಕೊಂದಿದ್ದು ನೋಟ್ಯಂತರ. ನೋಟ್ಯಂತರದ ನಂತರ ಪತ್ರಿಕೆ ನಡೆಸುವುದು ಕಷ್ಟವಾಗುತ್ತಿತ್ತು ಎಂದಿದ್ದಾರೆ. ಅಂದರೆ ಗೌರಿ ಕಪ್ಪು ಹಣದಿಂದ ಪತ್ರಿಕೆ ನಡೆಸುತ್ತಿದ್ದರಾ? ಒಂದೊಮ್ಮೆ ಕೃಷ್ಣ ಲೆಕ್ಕದ (ಅವರೇ ಹಲವು ವರದಿಗಳಲ್ಲಿ ಬಳಸಿದ ಶಬ್ದದಂತೆ) ಪ್ರಕಾರ ಪತ್ರಿಕೆ ನಡೆಸುತ್ತಿಲ್ಲ ಎಂದಾದರೆ ನೋಟ್ಯಂತರದ ನಂತರ ಯಾಕೆ ಸಮಸ್ಯೆಯಾಗುತ್ತಿತ್ತು? ನ್ಯಾಯದ ದುಡ್ಡು ಬರುತ್ತಿದ್ದಲ್ಲಿ ಖಂಡಿತ ಸಮಸ್ಯೆಯಾಗಲು ಸಾಧ್ಯವಿಲ್ಲ. ನೋಟ್ಯಂತರದಿಂದ ನಕ್ಸಲರು ಮತ್ತು ನಕ್ಸಲ್ ಬೆಂಬಲಿಗರಿಗೆ ಬರುತ್ತಿದ್ದ ಹಣದ ಹರಿವು ಸ್ಥಗಿತಗೊಂಡಿದೆ ಎನ್ನಲಾಗುತ್ತಿತ್ತು. ಇದೂ ಅದರದ್ದೇ ಪರಿಣಾಮವಾ? ಎಂಬ ಅನುಮಾನ ಬಾರದಿರದು. ಇಲ್ಲವಾದಲ್ಲಿ ನೋಟ್ಯಂತರದಿಂದ ಹೇಗೆ ತಾನೇ ಸಮಸ್ಯೆಯಾಗಲು ಸಾಧ್ಯ? ನೋಟ್ಯಂತರ ಸಮಯದಲ್ಲಿ ಪತ್ರಿಕೆಗಳಿಗೆ ಜಾಹೀರಾತು ಕಡಿಮೆಯಾಗಿದ್ದು ನಿಜ. ಆದರೆ ಗೌರಿ ತಮ್ಮ ಪತ್ರಿಕೆಗೆ ಜಾಹೀರಾತನ್ನೇ ಪಡೆಯುತ್ತಿರಲಿಲ್ಲ. ಹಾಗಾಗಿ ಆ ರೀತಿಯ ತೊಂದರೆಯಾಗಲೂ ಸಾಧ್ಯವಿಲ್ಲ. ಹಾಗಾದರೆ ನೋಟ್ಯಂತರ ಯಾವ ರೀತಿಯಲ್ಲಿ ಗೌರಿಗೆ ತೊಂದರೆಯಾಯಿತು ಎಂಬುದು ನನಗಿನ್ನೂ ಅರ್ಥವಾಗಿಲ್ಲ.

ಇರಲಿ. ಗೌರಿ ಲಂಕೇಶ್ ನನಗೆ ಇಷ್ಟವಾಗುವಂತೆ, ಬೇಸರವಾಗದಂತೆ ಬರೆಯಬೇಕು ಎಂದು ನಾನು ನಿರೀಕ್ಷಿಸಲಿಲ್ಲ. ಹಾಗೆ ನಿರೀಕ್ಷಿಸುವುದು ಸರಿಯಲ್ಲ ಎಂಬುದರ ಅರಿವು ನನಗಿದೆ. ಆದರೆ ಜನಮೆಚ್ಚುವಂತೆ ಬರೆಯಬಹುದಿತ್ತು. ಸತ್ವಪೂರ್ಣವಾಗಿ ಬರೆಯಬಹುದಿತ್ತು. ಭಾಷೆಯನ್ನು ಸಭ್ಯವಾಗಿ ಬಳಸಿಯೇ ಟೀಕಿಸಬಹುದಿತ್ತು. ಅವರಿಗಾಗದವರ ವಿರುದ್ಧ ಬರೆಯಬಹುದಿತ್ತು. ಅವರ ಅಕ್ರಮಗಳನ್ನು ಹೊರಗೆಳೆದು ಬರೆಯಬಹುದಿತ್ತು. ಅದಕ್ಕೆಲ್ಲ ಸಾಕಷ್ಟು ಅವಕಾಶಗಳಿದ್ದವು. ಅಭಿವ್ಯಕ್ತಿ ಸ್ವಾತಂತ್ರ್ಯವಿದೆ ಎಂಬ ಕಾರಣಕ್ಕೆ ನನಗೆ ಬೇಕಾದ್ದನ್ನು ಬೇಕಾದ ಹಾಗೆ ಅಭಿವ್ಯಕ್ತಿಪಡಿಸುತ್ತೇನೆ ಎಂಬುದು ಅಭಿವ್ಯಕ್ತಿ ಸ್ವಾತಂತ್ರ್ಯದ ಅತ್ಯಾಚಾರವಾಗುವುದಿಲ್ಲವೇ?

ಒಂದು ಸಿದ್ಧಾಂತ ಅವರಿಗೆ ಇಷ್ಟವಾಗುತ್ತದೆ. ಇನ್ನೊಂದು ಅವರಿಗೆ ಇಷ್ಟವಾಗುವುದಿಲ್ಲ. ಅದನ್ನು ವಿರೋಧಿಸಲಿ. ಅವರಿಗಾಗದ ಸಿದ್ಧಾಂತ ಇಷ್ಟಪಡುವವರನ್ನೂ ವಿರೋಧಿಸಲಿ. ಸಂಘಪರಿವಾರದವರನ್ನು, ಬಲಪಂಥೀಯರನ್ನು ಮಾನವವಿರೋಧಿಗಳು ಎಂದು ಕರೆಯುವ ಆಕೆಗೆ ಕೆಎಫ್‌ಡಿ, ಪಿಎಫ್‌ಐನಂತಹ ಸಂಘಟನೆಗಳು ಮಾನವತಾವಾದಿಗಳಂತೆ ಕಂಡಿರಬೇಕೆನೊ. ಅದಕ್ಕೆ ಅವರನ್ನು ಬೆಂಬಲಿಸುತ್ತಿದ್ದಳು. ಆದರೆ ಇದು ದ್ವಂದ್ವವಲ್ಲವೇ? ಆದರೆ ಯಾವುದನ್ನೇ ಆಗಲಿ ವಿರೋಧಿಸುವ ಬರದಲ್ಲಿ ಅದನ್ನು ದ್ವೇಷದ ಮಟ್ಟಕ್ಕೆ ಕೊಂಡೊಯ್ಯಬಾರದು. ಟೀಕೆ, ಟಿಪ್ಪಣಿಗಳು ಸಿದ್ಧಾಂತಕ್ಕೆ, ವಿಷಯಕ್ಕೆ ಸೀಮಿತವಾಗಿದ್ದರೆ, ಅದರಲ್ಲಿ ಸತ್ವವಿದ್ದರೆ ಅದು ದ್ವೇಷದ ಹಂತ ತಲುಪುವುದಿಲ್ಲ. ಆದರೆ ಅದನ್ನು ಮೀರಿ ವಿಷ ಕಾರುವ ರೀತಿಯಲ್ಲಿ ಟೀಕೆ- ಟಿಪ್ಪಣಿಗಳಿದ್ದರೆ ಆಗ ದ್ವೇಷ ಹುಟ್ಟಲು ನಾವೇ ಕಾರಣರಾಗುತ್ತೇವೆ. ಟೀಕಿಸುವುದರ ಜತೆಗೆ, ಅದನ್ನು ದ್ವೇಷದ ಹಂತಕ್ಕೆ ಕೊಂಡೊಯ್ಯದಿರುವ ಎಚ್ಚರಿಕೆಯೂ ನಮಗಿರಬೇಕು.

ಪತ್ರಕರ್ತರಾದ ನಾವೇ ಒಮ್ಮೆ ತಮ್ಮ ಆತ್ಮ ವಿಮರ್ಶೆ ಮಾಡಿಕೊಳ್ಳಬೇಕಿದೆ. ನಾವು ಯಾರನ್ನು ದಿಟ್ಟ, ಧೀರ, ಧೀಮಂತ ಪತ್ರಕರ್ತೆ ಎಂದು ಕರೆಯಲು ಹೊರಟಿದ್ದೇವೆ ಮತ್ತು ಅದರಿಂದ ನಾವು ಯಾವ ಸಂದೇಶ ನೀಡುತ್ತಿದ್ದೇವೆ ಎಂದು.

ಮನೆಯೊಳಗ ಹಾವಿರಲಿ, ಹಿಡಿವಾತ ಬರದಿರಲಿ

ಪ್ರಾಣೇಶ್ ಪ್ರಪಂಚ್

ಗಂಗಾವತಿ ಪ್ರಾಣೇಶ್
editoped@vishwavani.news

'ನೂರು ತಪ್ಪುಗಳಾದವೆಂದರೆ ಚೇಳು ಕಡಿತದೆ, ಸಾವಿರ ತಪ್ಪು ಮಾಡಿದರೆ ಹಾವು ಕಡಿತದೆ' ಎಂಬ ಮಾತು ನಮ್ಮ ಕಡೆ ಚಾಲ್ತಿಯಲ್ಲಿದೆ. ಇವುಗಳಿಂದ ಕಚ್ಚಿಸಿಕೊಂಡು ನರಳುವವರ ಮುಂದೆ ಕೂತ ಅಜ್ಜಿಯಂದಿರು 'ನೂರು ತಪ್ಪು ಯಾವ್ಯಾವು ಅಂತ ನೆನೆಸ್ಕೋ, ನೋವು ಕಮ್ಮಿ ಆಗಿ ವಿಷ ಇಳೀತದೆ' ಅಂತ ಹೇಳಿ ನರಳುವವನ ನೋವನ್ನು ಇನ್ನೂ ಹೆಚ್ಚು ಮಾಡುವುದರ ಜತೆಗೆ ವಿಷ ತಲೆಗೆ ಏರಿ ಇವರ ಸಾವಿರದಾ ಒಂದು ನೂರನೆ ತಪ್ಪು ಇವನು ಸಾಯವುದೇ ಆಗುತ್ತಿತ್ತು.

ಆಗೆಲ್ಲ ಕಂತಿ, ತೊಲೆಗಳ ಮಣ್ಣಿನ ಮನೆಗಳು, ಹಾವು, ಚೇಳುಗಳಿಗೆ 'ಫೈವ್ ಸ್ಟಾರ್' ಹೊಟೇಲ್‌ಗಳ ಸೌಲಭ್ಯ ಒದಗಿಸುತ್ತಿದ್ದವು. ಎಷ್ಟೋ ಸಾರಿ, ಅಂಗಾತ ಮಲಗಿದಾಗ ರಾತ್ರಿ ಹಾವಿನ ಬಾಲದ ತುದಿ ಮಾತ್ರ ತೊಲೆಗಳಿಂದ ಕಂಡು' ಅಮ್ಮಾ ಹಾವು' ಎಂದರೆ, ಅಮ್ಮ ' ರಾತ್ರಿ ಹಾವು, ಚೇಳು ಅನಬಾರದು ಆಸ್ತಿಕ, ಆಸ್ತಿಕ ಕರಿಯಪ್ಪಾ ತಾತಾ' ಅಂದುಕೋತ ಮಲಗಿರಿ ಅವು ಏನೂ ಮಾಡಂಗಿಲ್ಲ' ಎಂದು ಮಲಗಿಸಿಬಿಡುತ್ತಿದ್ದಳು. ನಮ್ಮ ತಂದೆಯ ತಮ್ಮ ನಾರಾಯಣಾಚಾರ್ಯ, ಆತನನ್ನು ನಾವು ನಾರಾಯಣ ಕಕ್ಕ ಎನ್ನುತ್ತಿದ್ದೆವು. ಆತ ಹಾವುಗಳನ್ನು ಹೊಡೆಯುವುದರಲ್ಲಿ ಎತ್ತಿದ ಕೈ, ' ಆತನ ಕೈಯಾಗೆ ಗರುಡ ಮಚ್ಚೆ ಇದೆ, ಆತನಿಗೆ ಹಾವು ಕಡಿಯಲ್ಲ, ಅಲ್ಲದೇ ಆತನ್ನ ಬಸಿರಿದ್ದಾಗ ನಮ್ಮತ್ತಿಗೆಗೆ ಹಾವು ಚೇಳು ಕಡಿದಿದ್ದರಿಂದ ಆತನಿಗೆ ವಿಷ ಏರಂಗಿಲ್ಲ ಆತನ ಕೈಯಾಗಿನ ಗರುಡ ಮಚ್ಚೆ ನೋಡಿದರೆ ಹಾವಿಗೆ ಕಣ್ಣು ಹೋಗಿಬಿಡ್ತಾವಾ, ಈತ ಏನು ಮಾಡಿದ್ರೂ ಅವು ಸುಮ್ಮನಿರ್ತಾವ' ಎಂದು ಧೈರ್ಯ ಹೇಳುತ್ತಿದ್ದ ನಮ್ಮ ಅಮ್ಮ ಮರುದಿನ ಆತನನ್ನು ಕರೆಸಿ, ತೊಲೆಯೊಳಗೆ ರಾತ್ರಿ ನಾನು ಹಾವಿನ ಬಾಲ ನೋಡಿದ ಜಾಗ ತೋರಿಸುತ್ತಿದ್ದಳು. ಕುರ್ಚಿ ಹಾಕಿಕೊಂಡು ನಿರ್ಭಯವಾಗಿ ಏರಿ, ಜಂತಿ ತೊಲಿಯೊಳಗ ಕೈ ಹಾಕಿ ಕಕ್ಕ ಹಾವಿನ ಬಾಲ ಹಿಡಿದು ಹೊರಗೆಳೆದು ಅದನ್ನು ಹೊಡೆಯುತ್ತಿದ್ದ. ಅದು ಸಿಗದಾಗ 'ಒಳಗ ಗುದ್ದು ಅಂತ ಅಕ್ಕಿ ಕಾಳು ಮಂತ್ರಿಸಿ ಆ ಗುದ್ದಿಗೆ ಹಾಕಿ, ಆ ಗುದ್ದಿಗೆ ಬಟ್ಟೆ ತುರುಕಿ ಇನ್ನು ಈ ಮನೆಗೆ ಹಾವು ಬರಂಗಿಲ್ಲ' ಎಂದು ಧೈರ್ಯ ಹೇಳುತ್ತಿದ್ದ.

ಆಗೆಲ್ಲ ಫೋನುಗಳಿರಲಿಲ್ಲ. ಫೋನು ಮಾಡಿದರೆ ಹಾವು ಹಿಡಿಯಲು ಬರುವ ಪರಿಸರ ಸ್ನೇಹಿ ಮೈಸೂರಿನ ಸ್ನೇಕ್ ಶ್ಯಾಂನಂಥವರೂ ಇರಲಿಲ್ಲ. ಈಗ ಇದೊಂದು ಹಾವು ಹಿಡಿದು ಅದನ್ನು ಕೊಲ್ಲದೆ ಮತ್ತೆ ಕಾಡಿಗೆ ಬಿಟ್ಟು ಬರುವವರ ಒಂದು ಸಂಘವೇ ಇರುವುದು ಒಂದು ಸಮಾಧಾನದ ವಿಷಯ. ನಮ್ಮ ಗಂಗಾವತಿಯಲ್ಲೂ ಡಾ. ಎಚ್.ಎನ್ ಶಿರಿಗೇರಿಯವರ ಮಗ ಶ್ರೀ ರಾಘವೇಂದ್ರ, ಶಿರಿಗೇರಿ ಈ ಸೇವಾಕಾರ್ಯ ಮಾಡುತ್ತಿದ್ದಾರೆ. ಕೆಲವು ಕಡೆ ಇದನ್ನು ದಂಧೆ ಮಾಡಿಕೊಂಡವರೂ ಇದ್ದಾರೆ. ಅವರೇ ಹಾವು ಬಿಟ್ಟು ಅದನ್ನು ಹಿಡಿಯಲು ಸಾವಿರಾರು ರೂಪಾಯಿ ಕೇಳುವ ಸುಲಭ ಶ್ರೀಮಂತಿಕೆ ಪಡೆಯಲು ಹೋಗಿ ಪೊರಕೆ ಸೇವೆ ತೆಗೆದುಕೊಂಡವರಿದ್ದಾರೆ. ಆಗೆಲ್ಲ ಹಾವು ಸಿಕ್ಕರೆ ಹೊಡೆದು ಕೊಂದೇ ಬಿಡುತ್ತಿದ್ದರು. ವಿಷಜಂತು ಬದುಕಿದ್ದರೆ ಇನ್ನೊಬ್ಬರನ್ನು ಕೊಲ್ಲುತ್ತದೆ ಎಂದು ಅದಕ್ಕೆ ಜಾಮೀನು ಕೊಡದೇ ಗಲ್ಲಿಗೇ ಏರಿಸಿಬಿಡುತ್ತಿದ್ದರು. ಈ ಕಾನೂನು ರಾಜಕಾರಣಿಗಳಿಗೂ ಅಷ್ಟೇ ಆದರೆ ಒಳ್ಳೆಯದೇನೋ ಎನಿಸುತ್ತದೆ ಒಮ್ಮೊಮ್ಮೆ.

ನಮ್ಮ ಗುರುಗಳಾದ ಬೀಚಿಯವರು ಒಂದು ಪ್ರಸಿದ್ಧ ಮಾತನ್ನು ಹೇಳುತ್ತಿದ್ದರು. ' ಬಹಳ ದಿನ ಬದುಕಬೇಕೆಂಬ ಹಾವು ಬೀದಿಗೆ ಬರಬಾರದು, ಮರ್ಯಾದೆಯಿಂದ ಬದುಕಬೇಕೆಂಬುವ ಮನುಷ್ಯ ರಾಜಕಾರಣಕ್ಕೆ ಬರಬಾರದು' ಎಂದು ಹೇಳುತ್ತಿದ್ದರು. ಹಾವು ಚೇಳು ಇದ್ದ ಮನೆಯೊಳಗೆ ನಿಧಿ ಇರುತ್ತದೆ ಎಂಬ ಮಾತು ಆಗ ಚಾಲ್ತಿಯಲ್ಲಿತ್ತು. ಈಗಿನಂತಾಗಿದ್ದರೆ ಐಟಿ ರೈಡ್ ಮಾಡುವವರು ಹಾವು ಚೇಳುಗಳಿರುವ ಮನೆಗೆ ಮುತ್ತಿಗೆ ಹಾಕುತ್ತಿದ್ದರು. ಜಂತಿ,ತೊಲೆಗಳ ಮಣ್ಣಿನ ಮನೆಗಳು ಹೋಗಿ ಆರ್‌ಸಿಸಿ ಮನೆಗಳು ಬಂದ ಮೇಲೆ ಹಾವು,ಚೇಳು, ತಿಗಣೆಗಳು ಕಡಿಮೆ ಆಗಿ 'ಡೆಂಗ್ಯೂ'ಸೊಳ್ಳೆಗಳು ಮಾತ್ರ ಹೆಚ್ಚಾದವು. ನಮ್ಮ ಬಾಲ್ಯದ ದಿನಗಳಲ್ಲಿ ಶೇಷಾಚಾರ್ ಎಂಬುವ ನಿಷ್ಠಾವಂತ ತ್ರಿಕಾಲ ಸಂಧ್ಯಾವಂದನೆ, ತ್ರಿಕಾಲ ಪೂಜಾ, ತ್ರಿಕಾಲ ಮಡಿಯಲ್ಲೇ ಇರುತ್ತಿದ್ದವರ ಮನೆಯಲ್ಲಿ ಸದಾ ಚೇಳು, ಹಾವು ಬರುತ್ತಿದ್ದವು. ಮನೆ ತುಂಬಾ ಬಟ್ಟೆ ಗಂಟುಗಳು, ಎಲ್ಲೆಂದರಲ್ಲಿ ಒದ್ದೆ ಪಂಚೆ, ಸೀರೆಗಳು, ದಾನವಾಗಿ ಬಂದ ಮೊರತಾಮ್ರದ ಪಾತ್ರೆಗಳಲ್ಲಿ ಹಾವೋ, ಚೇಳೋ ಖಾಯಂ ಇರುತ್ತಿದ್ದವು. ಅವು ಕಂಡ ಕೂಡಲೇ ಅವುಗಳನ್ನು ಕೊಲ್ಲದ ಆಚಾರರು ಇದ್ದಿಲಿನಿಂದ ಅಲ್ಲೊಂದು ಗರುಡ ಮಚ್ಚೆ ಬಿಡಿಸುತ್ತಿದ್ದರು. ಹೀಗಾಗಿ ಆಚಾರರು ಸುಣ್ಣ ಹಚ್ಚಿದ ಮನೆ ತುಂಬಾ ಇದ್ದಿಲಿನಿಂದ ಬರೆದ ಕರ್ರಗಿನ ಗರುಡ ಮಚ್ಚೆಗಳೇ, ನಿಷ್ಠಾವಂತ ವೈದಿಕ ಬ್ರಾಹ್ಮಣನ ಮನೆ ಈ ಗರುಡ ಮಚ್ಚೆಗಳಿಂದ ಮಲೆಯಾಳಿ ಮಾಂತ್ರಿಕನ ಮನೆಯಂತೆ ಕಾಣುತ್ತಿತ್ತು.

ಒಮ್ಮೆಯಂತೂ ಮಾರುದ್ದದ ಇಲಿ ನುಂಗಿದ ಹಾವು ಏಕಾದಶಿ ದಿನ ಆಚಾರರ ಮನೆ ಹೊಕ್ಕಿತು. ನಿರಾಹಾರದಿಂದ ನಿತ್ರಾಣವಾಗಿದ್ದ ಆಚಾರರು ಹಾವನ್ನು ನೋಡಿ ಕುಸಿದು ಹೋದರು. ' ಆಚಾರ್ರ ಮನ್ಯಾಗೆ ಮತ್ತೆ ಹಾವು ಬಂದದ, ಈ ಸಲ ದೊಡ್ಡ ಹಾವು' ಅಂತ, 'ಹೊಸ ಸಿನಿಮಾ ಬಂದದ' ಅನ್ನೋ ರೀತಿಯಲ್ಲಿ ಓಣಿ ಹುಡುಗರು ಕೂಗುತ್ತಿದ್ದಂತೆಯೇ ಆಚಾರರ ಮನೆ ಮುಂದೆ ಜನ ಸೇರಿದ್ದರು. ಮಡಿ ಹೆಂಗಸು ರಿಂದವ್ವನಂತೂ ' ಆಚಾರ್ರು, ಏನ್ ಹಾವು ಗಂಟು ಬಿದ್ದಾವರಿ ನಿಮ್ಮ ಮನೀಗೆ ನೀವು ಶೇಷಾಚಾರ್ ಅನ್ನೊ ಹೆಸರೇ ಬಿಟ್ಟು ಬೇರೆ ಹೆಸರಿಟ್ಟುಕೊಳ್ಳಿ, ವೈಷ್ಣವರು ಅಂತ ಒಂದೂ ಶಿವನ ಫೋಟೋ ಇಲ್ಲ ನಿಮ್ಮ ಮನೀಯೊಳಗೆ, ಕಡೇಮನೆ ಆ ಲಿಂಗಾಯತರ ರುದ್ರಮೂರ್ತಿ ಸದಾ ಅಂತಿರ್ತಾನ, ಹಾವುಗಳು ವಿಷ್ಣು ದೇವರಿಗೆ ಹೆದರೋದಿಲ್ಲಂತೆ, ಮನೆಯಲ್ಲಿ ಶಿವನ ಫೋಟೋ ಇದ್ದರೆ ಅವು ಬರಂಗಿಲ್ಲಂತೆ, ಆಚಾರ್ರಿಗೆ ಹೇಳ್ರಿ ನಾನೇ ಒಂದು ಶಿವನ ಫೋಟೋಕ್ಕ ಕಟ್ಟು ಹಾಕಿಸಿ ಕೊಡ್ತೇನಿ ಅಂದಾನಂತೆ' ಎಂದು ಹೇಳಿದ್ದು ನೆನಪಾಗಿ, ಆಚಾರರು ಅದಕ್ಕೂ ಒಪ್ಪಿದರು. ಆದರೆ ಆ ರುದ್ರ ಮೂರ್ತಿ ಒಂದು ಸಣ್ಣ ಶಿವಲಿಂಗದ ಫೋಟೋ ಮೇಲೆ ಹಾಕಿ ಕೆಳಗೆ ಅರ್ಧಕ್ಕೂ ಹೆಚ್ಚು ಜಾಗದಲ್ಲಿ 'ಪ್ರೀತಿಯ ಕಾಣಿಕೆ ರುದ್ರಮೂರ್ತಿಯವರಿಂದ' ಅಂತ ಹೆಸರು ಹಾಗೂ ತನ್ನ ಫೋಟೋ ಹಾಕಿಬಿಟ್ಟಿದ್ದ. ನಂತರ ಅನೇಕರು ಮನಿ ಒಳಗೆ ಹೋಗಿ ಸಿಂಬೆ ಸುತ್ತಿ ಮಲಗಿದ್ದ ಹಾವನ್ನು ನೋಡಿ ಗಾಬರಿಯಾಗಿ ಹೊರಬಂದುಬಿಟ್ಟರು. ಹೌಹಾರಿ ಕೂತಿದ್ದ ಆಚಾರರಿಗೆ ಅವರ ಗದ್ದೆ ಕೆಲಸ ಮಾಡುತ್ತಿದ್ದ ಉಡುಚಪ್ಪ ಬರೋದು ಕಾಣಿಸಿತು. ದಷ್ಟಪುಷ್ಟ ಆಳು, ಗಿರಿಜಾ ಮೀಸೆ, ಗುಂಗುರು ಕೂದಲಿನ ಉಡುಚಪ್ಪ ಕೂದಲಿನಷ್ಟೆ ಕಪ್ಪು ಬಣ್ಣ ಹೊಂದಿದ್ದು ಕಾಳ ಯಮನಂತೆ ಇದ್ದ, ಕೈಯಲ್ಲಿ ಎಳನೀರು ಒಂದಷ್ಟು ಅಕ್ಕಿ ಸಮೇತ ಆಚಾರರ ಭೇಟಿಗೆ ಅವರೇ ಹೇಳಿದಂತೆ ಏಕಾದಶಿ ದಿನ ಬಂದಿದ್ದ. ಏಕಾದಶಿ, ಪೂಜೆ, ಊಟ, ಮಡಿಯ ರಗಳೆ ಇರೋದಿಲ್ಲ, ಬೇರೆಯವರಿಗೂ ಊಟದ ವ್ಯವಸ್ಥೆ ಮಾಡುವ ಪ್ರಸಂಗ ಬರುವುದಿಲ್ಲವೆಂಬುದು ಆಚಾರರ ಸನಾತನ ತತ್ವವಾಗಿತ್ತು. ಹೀಗಾಗಿ ಅವತ್ತೇ ಅನನನ್ನು ಕರೆಸಿದ್ದರು.



'ಉಡುಚಪ್ಪ ಬಂದ, ಉಡುಚಪ್ಪ ಬಂದ, ಅವ ಹಾವ್ ಬಡೀತಾನ' ಅಂತ ಓಣಿ ಮಂದಿ ಸಡಗರಪಟ್ಟರು, ಕೆಲವರು' ಉಡುಚಪ್ಪ ಹಾವು ಹೊರಗ ತಂದು ತೋಡಿಸಿ ಹೊಡಿಯೋ ನೋಡ್ತೀವಿ, ಇಷ್ಟು ದೊಡ್ಡ ಹಾವು ನೋಡೋದಿಕ್ಕೆ ನಮಗೆ ಅಡವಿಗೆ ಹೋಗೋದಾಗೋದಿಲ್ಲ. ಅನಾಯಾಸ ಇದ್ದಲ್ಲಿಗೇ ಆಚಾರ್ರಮನಿಗೆ ಬಂದದ' ಎಂದು ಅಹವಾಲು ಸಲ್ಲಿಸಿದರು. ಮೊದಲೇ ಕುಗ್ಗಿದ್ದ, ಉಪವಾಸದಿಂದ ಸೋತಿದ್ದ ಆಚಾರ್ಯರು' ಲೇ ಉಡುಚಪ್ಪ ಹಾವು ಒಯ್ದು ಅವರ ಕೊರಳಾಗ ಹಾಕಲೇ ನೋಡಿ, ಅಪ್ಪಿಕೊಂಡು ಮುದ್ದು ಕೊಡವಲ್ಲರ‍್ಯಾಕೆ' ಎಂದು ರೇಗಿದರು. ಸೇರಿದ್ದ ಜನ,ತನ್ನ ಬರುವಿಕೆಗೆ ಹಿಗ್ಗಿದ್ದ ಜನರನ್ನು ಕಂಡು ಉಡುಚಪ್ಪ ಒಳ ಹೋಗಿ ಹಾವಿನ ಗಾತ್ರ ನೋಡಿ ಗಾಬರಿಯಾಗಿ ಹೊರಬಂದ. 'ಇವತ್ತು ಶನಿವಾರ ನಾನು ಹಾವು ಮುಟ್ಟಂಗಿಲ್ಲ, ಹೊಡೆಯಂಗಿಲ್ರಿ,' ಎಂದು ಹೇಳಿ ' ಆಚಾರ್ರು, ನಾ ಮುಂದಿನ ಶನಿವಾರ ಬರ್ತಿನ್ರಿ,' ಎಂದು ಹೇಳಿ ಹೊರಟೇ ಬಿಟ್ಟ. ಅದರ ಸುತ್ತ ಗರುಡ ಮಚ್ಚೆ ಬರೆದ ಆಚಾರರು ಸುಮ್ಮನೆ ಕೂತರು. ಓಣಿಯ ಹುಡುಗರು ಸೈಕಲ್ ಏರಿ ಊರಿನ ಮೂಲೆ ಮೂಲೆ ಹುಡುಕಿ ಒಬ್ಬ ಮುಸ್ಲಿಂನನ್ನು ಕರೆತಂದು ಆತ ಅದನ್ನು ಒಯ್ದಾಗ ರಾತ್ರಿ. ' ಅದನ್ನು ಕೊಂದು ಬಿಡೋ, ಬಿಟ್ಟ ಬಿಟ್ಟೀಯಂದ್ರ ಅದು ಮತ್ತ ನನ್ನ ಮನೀಗೇ ಬರ್ತದ' ಅಂತ ಆಚಾರರು ಹಿಂದಿನಿಂದ ಕೂಗಿ ಕೂಗಿ ಹೇಳಿದ್ರು.

ಮನಿ ಒಳಗೆಲ್ಲ ಗರುಡ ಮಚ್ಚೆ ಬರೆದಿದ್ದ ಆಚಾರರು, ಹಾವು ಚೇಳು ಕಡಿದವರಿಗೆ ಅವು ಕಡಿದ ಜಾಗದಲ್ಲಿ, ಆಗಿನ 'ಪತ್ತಿಪೆನ್ '(ಇಂಕ್‌ಪೆನ್)ನ ಹಿತ್ತಾಳೆಯ ನಾಲಿಗೆಯಿಂದ ಗೀರಿ, ಗೀರಿ ಗರುಡ ಮಚ್ಚೆ ಬರೆಯುತ್ತಿದ್ದರು. ಪೆನ್ನಿನ ನಾಲಿಗೆ ಗೀರುವಿಕೆಗೆ ಚರ್ಮಕಿತ್ತು, ರಕ್ತ ಸುರಿದು ಅವನಿಗೆ ಹಾವು ಚೇಳು ಕಡಿದ ನೋವು ಹೋಗಿ ಆ ಗಾಯದ ನೋವೇ ತಿಂಗಳುಗಟ್ಟಲೆ ಇರುತ್ತಿತ್ತು. ಆಗೆಲ್ಲ ಹಾವು ಕಡಿತಕ್ಕೆ ಸರಕಾರಿ ಆಸ್ಪತ್ರೆಯಲ್ಲಿ ಮಾತ್ರ ಇಂಜೆಕ್ಷನ್ ಮಾಡುತ್ತಿದ್ದರು. ಹಾವಿನಲ್ಲೂ ಹಲವಾರು ಬಗೆ, ಕ್ಯಾರೆ, ಹಾಮ, ಬಳಿವಡಕ, ನೀರುಹಾವು, ನಾವೆಲ್ಲ ಮಳೆಹುಳುಗಳೇ ಮುಂದೆ ಬಂದು ಬೆಳೆದು ನಾಗರಹಾವಾಗುತ್ತದೆ ಎಂದು ಬಾಟಲಿಯಲ್ಲಿ ಅವನ್ನು ಹಿಡಿದಿಟ್ಟು ದಿನವೂ ಅದನ್ನು ನೋಡುತ್ತಾ 'ಬುಸ್' ಎಂದ ಕೂಡಲೇ ಬಿಟ್ಟರಾಯಿತೆಂದು ಕಾಯುತ್ತಿದ್ದೆವು. ಒಮ್ಮೆಯಂತೂ ಹಾಲಿನ ಹಂಪಮ್ಮನ ಮನೆಯ ಹೊರಗಿನ ಕಟ್ಟೆಯ ಕಲ್ಲಿನ ತೂತಿನಿಂದ ಒಂದು ಚೇಳು ಹೊರಬಂತು, ಕಲ್ಲು ತಗೊಂಡು ಜಜ್ಜಿಕೊಂಡೆವು.ಅದರ ಹಿಂದೆಯೇ ಮತ್ತೊಂದರ ಕಥೆ ಮುಗಿಸಿದೆವು. ಮತ್ತೆ ಒಂದು ಕಾಣಿಸಿಕೊಂಡಿತು. ಹೀಗೆ ಆ ಸಂದಿಯಿಂದ ಹೈದರಾಲಿ ಸೈನಿಕರು ಬಂದಂತೆ ಒಂದೊಂದೇ ಬಂದ ಚೇಳುಗಳನ್ನು ಹೊರ ತೆಗೆದೆವು. ಹೀಗೆ ಬಂದ ಚೇಳು ಅರವತ್ತಕ್ಕೂ ಹೆಚ್ಚು ಇದ್ದವು. ಕಟ್ಟೆ ಕೆಳಗೆ ನಿಧಿ ಇದೆ ಅದಕ್ಕೆ ಇಷ್ಟು ಚೇಳು ಇವೆ ಎಂದು ಹಂಪಮ್ಮನನ್ನು ನಂಬಿಸಿ ಇಡೀ ಕಟ್ಟೆಯನ್ನು ಕೆಡವಿ, ತೆಗೆದು ಹುಡುಕಿದರೆ ಒಂದೂ ಇಲ್ಲ! ಕಟ್ಟೆ ಹಾಳಾದಕ್ಕೆ ಹಂಪಮ್ಮ ನಮಗೆಲ್ಲ 'ಚೇಳು ಕಡಿದೇ ನೀವೆಲ್ಲ ಸಾಯಿರಿ' ಎಂದು ಶಪಿಸಿದಳು.

ಅಂತಾರಾಷ್ಟ್ರೀಯ ಖ್ಯಾತಿಯ ಮೈಸೂರ್ ಸ್ನೇಕ್ ಶ್ಯಾಂನಿಂದ ಹಿಡಿದು ನಮ್ಮೂರಿನ ಶಿರಿಗೇರಿ ರಾಘವೇಂದ್ರನವರೆಗೆ ಅನೇಕ ಯುವಕರು ಹಾವು ಹಿಡಿದು ಜನರ ಭೀತಿ ತೊಲಗಿಸುವ ಕೆಲಸಕ್ಕೆ ಜೀವದ, ಅಪಾಯದ ಹಂಗು ತೊರೆದು ಶ್ರಮಿಸುತ್ತಿದ್ದಾರೆ. ಫಲಾಪೇಕ್ಷೆ ಇಲ್ಲದೇ ಯುವಕರಿಗೆ ಈ ಕಲೆಯನ್ನು ಕಲಿಸುತ್ತಿದ್ದಾರೆ. ಇಂಥವರಿಗೆ ಸಂಘ ಸಂಸ್ಥೆಗಳಿಂದ ಗೌರವ ಸಲ್ಲಬೇಕು. ಹಾವು ಕಚ್ಚಿದವರಿಗೆ ಶೀಘ್ರ ಚಿಕಿತ್ಸೆ ಸೌಲಭ್ಯ ಸಿಗುವಂತಾಗಬೇಕು. ಹಾವು ಹಿಡಿಯಲು ಬರುವ ಸಮಾಜ ಸೇವಾಕರ್ತರಿಗೆ ಗೌರವ ಕೊಡಬೇಕು. ಹಾವು ಹಿಡಿಯಲು ಹೋಗುವಾಗ ಕೆಲವು ಮನೆಗಳವರು ಆಡುವ ಮಾತು, ನಡೆದುಕೊಳ್ಳುವ ರೀತಿಗಳನ್ನು ಶಿರಿಗೇರಿ ರಾಘವೇಂದ್ರ ಅನುಭವ ರೂಪದಲ್ಲಿ ಪ್ರಕಟಿಸಬೇಕು. ಅದು ಮುಂದಿನ ಪೀಳಿಗೆಗೆ ಮಾರ್ಗದರ್ಶಿಯಾಗುತ್ತದೆ. ಹಾವು ಅರಿತು ಹಿಡಿಯುವವನಿಗೆ ಹೋಮ, ಅದೇ ಹಾವು, ಮರೆತು ಮುಟ್ಟುವವನಿಗೆ ತಂದೀತು ಸಾವು. ಈ ದಿಸೆಯಲ್ಲಿ ತರಬೇತಿ ಶಿಬಿರಗಳು ನಡೆಯಬೇಕು. ತರಬೇತಿ ಪಡೆದವರು ಇದನ್ನೂ ಒಂದು ಅಂಜಿಸಿ, ಸುಲಿಯುವ ದಂಧೆ ಮಾಡಿಕೊಳ್ಳದೇ, ಸೇವೆಯ ಸಾಧನ ಮಾಡಿಕೊಳ್ಳಬೇಕು. ಅದು ಬಿಟ್ಟು ಹಾವಿಗಿಂತ ಹಾವು ಹಿಡಿಯುವವರಿಗೇ ಅಂಜುವಂತಾಗಬಾರದು. 'ಮನೆಯೊಳಗೆ ಹಾವೇ ಇರಲಿ; ಹಿಡಿಯುವಾತನೇ ಒಳಗೆ ಬರದಿರಲಿ' ಎಂಬ ನಾಣ್ಣುಡಿ ಜಾರಿಗೆ ಬರದಿರಲಿ.